# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 539
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 09-03-2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಯ ಬೋಧನೆಗೆ ಎಷ್ಟು ಶಾಲೆಗಳನ್ನು ಪ್ರಾರಂಭಿಸಲಾಗಿದೆ; ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | 2019-20ನೇ ಸಾಲಿನಿಂದ 1001 ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ತರಗತಿಯ ಜೊತೆಗೆ 1ನೇ ತರಗತಿಯ ಆಂಗ್ಲ ಮಾಧ್ಯಮ(ದ್ವಿ-ಭಾಷಾ ಮಾದರಿ) ವಿಭಾಗವನ್ನು ಪ್ರಾರಂಭಿಸಲಾಗಿದೆ.<br><br>ಒಂದನೇ ತರಗತಿಗೆ ಪ್ರತಿ ಶಾಲೆಗೆ ಗರಿಷ್ಠ 30 ಮಕ್ಕಳ ದಾಖಲಾತಿ ನಿಗದಿಪಡಿಸಲಾಗಿತ್ತು. ಅದರಂತೆ 2019-20ನೇ ಸಾಲಿಗೆ 1001 ಶಾಲೆಗಳಲ್ಲಿ ಒಟ್ಟು 26443 ವಿದ್ಯಾರ್ಥಿಗಳು ದಾಖಲಾತಿ ಪಡೆದಿರುತ್ತಾರೆ. |
| (ಆ) | ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಲಾಗಿದೆಯೇ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ನೀಡಲಾಗಿದೆಯೇ; | ಆಂಗ್ಲ ಮಾಧ್ಯಮ(ದ್ವಿ-ಭಾಷಾ) ವಿಭಾಗ ಹೊಂದಿರುವ ಶಾಲೆಗಳಿಗೆ ಪ್ರತ್ಯೇಕ ಶಿಕ್ಷಕರನ್ನು ನೇಮಿಸಿರುವುದಿಲ್ಲ. ಆದರೆ, 2019-20ನೇ ಸಾಲಿನಲ್ಲಿ ಆಯ್ಕೆಯಾದ 1001 ಸರ್ಕಾರಿ ಶಾಲೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕ ವೃಂದದಿಂದಲೇ ಆಂಗ್ಲ ಮಾಧ್ಯಮದಲ್ಲಿ ತರಗತಿ ನಿರ್ವಹಿಸುವ ಸಾಮರ್ಥ್ಯವಿರುವ ಒಬ್ಬ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡು ಒಟ್ಟು 1518 ಶಿಕ್ಷಕರಿಗೆ 15 ದಿನಗಳ ವಿಶೇಷ ಬುನಾದಿ ತರಬೇತಿ (EMTIP-English Medium Teachers Induction Programme) ನೀಡಲಾಗಿದೆ. |
| (ಇ) | 2020-21ನೇ ಸಾಲಿನಲ್ಲಿ ಎಷ್ಟು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆಗಳಿವೆ;(ವಿವರ ನೀಡುವುದು) | 2020-21ನೇ ಸಾಲಿಗೆ 1000 ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ತರಗತಿಯ ಜೊತೆಗೆ 1ನೇ ತರಗತಿಯ ಆಂಗ್ಲ ಮಾಧ್ಯಮ(ದ್ವಿ-ಭಾಷಾ ಮಾದರಿ) ವಿಭಾಗವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಜಿಲ್ಲಾವಾರು ಒಟ್ಟು 835 ಪ್ರಸ್ತಾವನೆಗಳು ಸ್ವೀಕೃತವಾಗಿವೆ. ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ. |
| (ಈ) | ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಯೋಚಿಸುತ್ತಿದೆಯೇ; ಇದ್ದಲ್ಲಿ, ಸರ್ಕಾರದ ಯೋಜನೆಗಳಾವುವು? (ವಿವರ ನೀಡುವುದು) | ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ. |

ಇಪಿ 55 ಯೋಸಕ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ವಿ.ಪ.ಪ್ರಶ್ನೆ ಸಂಖ್ಯೆ:539 ಅನುಬಂಧ

## ಜಿಲ್ಲಾವಾರು ಮಾಹಿತಿ

| ಕ್ರ. ಸಂ. | ಜಿಲ್ಲೆಗಳು | ಶಾಲೆಗಳ ಸಂಖ್ಯೆ | 2019-20ನೇ ಸಾಲಿನಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಿಸಲಾದ ಶಾಲೆಗಳ ಸಂಖ್ಯೆ | 2020-21ನೇ ಸಾಲಿಗೆ ಸ್ವೀಕೃತವಾಗಿರುವ ಪ್ರಸ್ತಾವನೆಗಳ ಸಂಖ್ಯೆ |
|---|---|---|---|---|
| 1 | Bagalkot | 1457 | 28 | 24 |
| 2 | Ballari | 1545 | 39 | 17 |
| 3 | Belagavi | 1550 | 35 | 21 |
| 4 | Belagavi Chikkodi | 1957 | 39 | 31 |
| 5 | Bengaluru Rural | 1148 | 16 | 25 |
| 6 | Bengaluru U South | 958 | 69 | _ |
| 7 | Bengaluru U North | 555 | 58 | _ |
| 8 | Bidar | 1436 | 26 | 26 |
| 9 | Chamarajanagara | 864 | 17 | 14 |
| 10 | Chikkaballapura | 1584 | 20 | 37 |
| 11 | Chikkamangaluru | 1570 | 21 | 36 |
| 12 | Chitradurga | 1764 | 24 | 40 |
| 13 | Dakshina Kannada | 1084 | 48 | _ |
| 14 | Davanagere | 1506 | 35 | 19 |
| 15 | Dharwad | 870 | 28 | 3 |
| 16 | Gadag | 729 | 17 | 9 |
| 17 | Hassan | 2635 | 38 | 57 |
| 18 | Haveri | 1325 | 25 | 23 |
| 19 | Kalburgi | 2072 | 39 | 36 |
| 20 | Kodagu | 442 | 8 | 8 |
| 21 | Kolar | 1940 | 24 | 46 |
| 22 | Koppal | 1122 | 20 | 20 |
| 23 | Mandya | 1847 | 32 | 34 |
| 24 | Mysuru | 2140 | 46 | 31 |
| 25 | Raichur | 1626 | 33 | 26 |
| 26 | Ramanagara | 1392 | 24 | 26 |
| 27 | Shivamogga | 2034 | 31 | 42 |
| 28 | Tumakuru | 2196 | 31 | 48 |
| 29 | Tumakuru Madhugiri | 1365 | 18 | 31 |
| 30 | Udupi | 714 | 24 | 2 |
| 31 | Uttara Kannada | 1034 | 14 | 23 |
| 32 | Uttara Kannada Sirsi | 1217 | 13 | 31 |
| 33 | Vijayapura | 1989 | 38 | 34 |
| 34 | Yadagiri | 1059 | 23 | 15 |
| | **TOTAL** | **48726** | **1001** | **835** |